# KANNADA

## PAPER—II

## ( LITERATURE )

Time Allowed : Three Hours

Maximum Marks : 250

### QUESTION PAPER SPECIFIC INSTRUCTIONS

**Please read each of the following instructions carefully before attempting questions**

There are EIGHT questions divided in two Sections.

Candidate has to attempt FIVE questions in all.

Question Nos. **1** and **5** are compulsory and out of the remaining, THREE are to be attempted choosing at least ONE question from each Sections.

The number of marks carried by a question/part is indicated against it.

Answers must be written in KANNADA (Kannada script).

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

## SECTION—A

1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ, ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ: (*150* ಪದಗಳ ಉತ್ತರ ಮಿತಿ) : 10×5=50

   (a) ನೀನುಳ್ಳೊಡೆಲ್ಲರೊಳ್ ರೆಮ
   ಗೇನು ಮವಿಲ್ ಮನದೊಳಿಲ್ಲದೆಂತನೆ ಮಗನೇ ।
   ಭಾನುವೇ ಸಾಲದೆ ಪಗಲೆನಿ
   ತಾನುಂ ದೀವಿಗೆಗಳುರಿದೊಡೇಂ ಸಂದಿದೊಡೇಂ ॥

   (b) ಕೊಟ್ಟ ಭಾಷೆಗೆ ಮರಳಿ ಬಾಣವ
   ತೊಟ್ಟನೇ ತಾನೊಡೆಯ ನೆಂದರೆ
   ಯಟ್ಟದನೆ ಪಾಂಡವರೊಳನುಸಂಧಾನವನು ಬಿಸುಟು ।
   ನಟ್ಟ ಕಣೆಗಳುಕ್ಕಿದನೆ ಕೌರವ
   ಕಟ್ಟನಕಟಕಟೆಂದು ಕಾಯವ
   ಬಿಟ್ಟ ಕರ್ಣನೊಳಾರು ಸರಿಯೆನುತಿರ್ದುದಮರಗಣ ॥

   (c) ನಿಮಗೆ ಕೆಲಸವಿಲ್ಲ ನಿಮ್ಮಾಣ್ಮಗಾದರೆ
   ಸುವಿವೇಕಯೆಳ್ಳನಿತಿಲ್ಲ
   ಅವನಿಯನಾಳುತ ಮುನಿಯಂತೆ ನಡೆವುದಿ
   ದವಿವೇಕಿಗಳ ನಡೆಯಲ್ತೆ.

   (d) ಅಡವಿಯೊಳಗಾಡುವ ಮೃಗ ಜಾತಿ ಪಕ್ಷಿಗಳಿಗೆಲ್ಲ
   ಅಡಿಗಡಿಗೆ ಆಹಾರ ವಿತ್ತವರು ಯಾರೊ
   ಪಡೆದ ಜನನಿಯ ತೆರದೆ ಸ್ವಾಮಿ ಹೊಣೆಗೀಡಾಗಿ
   ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ.

   (e) ಲೋಕದ ಡೊಂಕು ನೀವೇಕೆ ತಿದ್ದುವಿರಿ
   ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
   ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
   ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
   ಕೂಡಲ ಸಂಗಮದೇವ.

2. (a) ದೇಸಿ ಮಾರ್ಗಗಳ ಸುಂದರ ಸಮನ್ವಯವನ್ನು ಪಂಪನ ನಿಮ್ಮ ಪಠ್ಯಭಾಗದ ಆಧಾರದಲ್ಲಿ ವಿವರಿಸಿರಿ. 20

   (b) ಶಿವಶರಣರ ಆಧ್ಯಾತ್ಮಿಕ ಸಾಧನೆ, ವಚನಗಳಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ. 20

   (c) ಸುಕುಮಾರಸ್ವಾಮಿಯ ಕಥೆಯಲ್ಲಿನ ವಂಶಾವಳಿಗಳ ಸ್ವಾರಸ್ಯವನ್ನು ವಿವರಿಸಿರಿ. 10

3. (a) ಕರ್ಣನ ಪಾತ್ರದ ಶೌರ್ಯ, ತ್ಯಾಗ, ನಿಷ್ಠೆ, ದುರ್ವಿಧಿ ವಿಲಾಸ ಇವುಗಳನ್ನು ಕುಮಾರವ್ಯಾಸನ ಕರ್ಣಪರ್ವದ ಹಿನ್ನೆಲೆಯಲ್ಲಿ ಚರ್ಚಿಸಿರಿ. 20

(b) ನಂಬಿಯಣ್ಣನ ಶೃಂಗಾರ-ಭಕ್ತಿಗಳ ಸಂಮಿಶ್ರ ಚಿತ್ರಣ ಹರಿಹರನ ರಗಳೆಯಲ್ಲಿ ಹೇಗೆ ಮೂಡಿಬಂದಿದೆ? 20

(c) ಇತರ ದಾಸರುಗಳಿಂದ ಕನಕದಾಸ ಹೇಗೆ ಭಿನ್ನವಾಗಿ ಸಾಹಿತ್ಯ ಕೃಷಿ ಮಾಡಿದ್ದಾನೆ? ವಿವರಿಸಿರಿ. 10

4. (a) ಭರತೇಶನನ್ನು ಆದರ್ಶ ಮಾನವನಾಗಿ ಚಿತ್ರಿಸುವಲ್ಲಿ ರತ್ನಾಕರ ಯಶಸ್ಸನ್ನು ಸಾಧಿಸಿರುವ ಬಗೆಯನ್ನು ವಿವರಿಸಿರಿ. 20

(b) ಪಂಪ ಮತ್ತು ಕುಮಾರವ್ಯಾಸರು ದುರ್ಯೋಧನನನ್ನು ಚಿತ್ರಿಸಿರುವ ಬಗೆಯ ವೈವಿಧ್ಯವನ್ನು ನಿಮ್ಮ ಪಠ್ಯಭಾಗದ ಹಿನ್ನೆಲೆಯಲ್ಲಿ ವಿವರಿಸಿರಿ. 20

(c) ಸಮಾಜ ಸುಧಾರಣೆಗೆ ಭಕ್ತಿ ಹೇಗೆ ಸಮರ್ಥ ಸಾಧನವಾಗಿದೆಯೆಂಬುದನ್ನು ವಚನಕಾರರ ಹಿನ್ನೆಲೆಯಲ್ಲಿ ಚರ್ಚಿಸಿರಿ. 10

## SECTION—B

5. ಈ ಕೆಳಗಿನವುಗಳ ಕುರಿತು ಟಿಪ್ಪಣಿ ಬರೆಯಿರಿ (ಉತ್ತರ ಮಿತಿ *150* ಪದಗಳು) : 10×5=50

(a) ದೇಶದ ದಾಸ್ಯ-ದಾರಿದ್ರ್ಯಗಳ ಕಟುವಿಮರ್ಶೆ ನಿಮಗಿಟ್ಟಿರುವ ಬೇಂದ್ರೆ ಕವಿತೆಯಲ್ಲಿ ಹೇಗೆ ಮೂಡಿಬಂದಿದೆ?

(b) ಶೂದ್ರ ತಪಸ್ವಿ ನಾಟಕದ ಆಶಯವನ್ನು ವಿವರಿಸಿರಿ.

(c) ಮೊಸರಿನ ಮಂಗಮ್ಮ ಕತೆ ಬದುಕಿನ ಔನ್ನತ್ಯವನ್ನು ಹೇಗೆ ಪ್ರತಿಬಿಂಬಿಸುತ್ತದೆ?

(d) ಕಾರಂತರ ಅನುಭವ ಜ್ಞಾನ ಹೇಗೆ ಬೆಟ್ಟದ ಜೀವ ಕಾದಂಬರಿಯಲ್ಲಿ ವ್ಯಕ್ತವಾಗಿದೆ? ತಿಳಿಸಿರಿ.

(e) ಒಗಟುಗಳು ತಿಳಿಸುವ ಜನಜೀವನ ಮತ್ತು ಜನಪದ ಜ್ಞಾನಗಳನ್ನು ವಿವರಿಸಿರಿ.

6. (a) "ನವ್ಯ ಕಾವ್ಯ ಜೀವನದ ಸಂಕೀರ್ಣತೆಯನ್ನು ಸರಳಗೊಳಿಸದೆ ಅನುಭಾವಕ್ಕೆ ಭಾಷೆಯಲ್ಲಿ ಶರೀರ ಕೊಡುವ ಪ್ರಯತ್ನ ಕೊಡುತ್ತದೆ" - ಚರ್ಚಿಸಿರಿ. 20

(b) ಮಾಧವಿ ಕಾದಂಬರಿಯಲ್ಲಿ ಆಧುನಿಕ ಮಹಿಳೆಯ ಚಿತ್ರಣ ಹೇಗೆ ಮೂಡಿಬಂದಿದೆ? ಚರ್ಚಿಸಿರಿ. 20

(c) ನಿಮಗಿಟ್ಟಿರುವ ಯಶವಂತ ಚಿತ್ತಾಲರ ಕಥೆಯಲ್ಲಿ ಕಾಣಬರುವ ಮಾನವ ಬದುಕಿನ ಸಂಕೀರ್ಣತೆಗಳನ್ನು ವಿವರಿಸಿರಿ. 10

7. (a) ನವೋದಯ ಕವಿತೆಗಳ ಜನಪ್ರಿಯತೆಯನ್ನು ಏಕೆ ನವ್ಯ ಪಡೆದುಕೊಳ್ಳಲಿಲ್ಲ? ವಿಶದೀಕರಿಸಿರಿ. 20

(b) ತುಘಲಕ್ ಹೇಗೆ ವಿಶಿಷ್ಟ ವಿಲಕ್ಷಣ ವ್ಯಕ್ತಿಯಾಗಿ ನಾಟಕದಲ್ಲಿ ಚಿತ್ರಿತವಾಗಿದ್ದಾನೆ? ವಿವರಿಸಿರಿ. 20

(c) ಮೂರ್ತಿರಾಯರ ವೈಚಾರಿಕ ನೆಲೆಯನ್ನು ದೇವರು ಕೃತಿಯ ಹಿನ್ನೆಲೆಯಲ್ಲಿ ಚರ್ಚಿಸಿರಿ. 10

8. (a) ಜಾನಪದ ಪರಿಕಲ್ಪನೆಗಳನ್ನು ಐತಿಹಾಸಿಕ ನೆಲೆಯಲ್ಲಿ ಚರ್ಚಿಸಿ. 20

(b) ಜನಪದ ಕಥೆಗಳ ವರ್ಗೀಕರಣದಲ್ಲಿ [illegible] ಅನುಸರಿಸುವ ವಿಧಾನವನ್ನು ಚರ್ಚಿಸಿ. 20

(c) ಎ.ಕೆ. ರಾಮಾನುಜನ್ ಹೊಸಗನ್ನಡ ಕಾವ್ಯ ಸಂದರ್ಭದಲ್ಲಿ ಬಳಸಿದ ರಚನಾ ಕೌಶಲ್ಯ ಮತ್ತು ವಸ್ತು ವೈವಿಧ್ಯವನ್ನು ಚರ್ಚಿಸಿ. 10

* * *